**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹಾನಗಲ್**

**ಸಿ.ಸಿ ನಂ.776/2021**

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಶಂಕರಪ್ಪ ಹನುಮಂತಪ್ಪ ಹರಲಾಪುರ | ಪಿಡಬ್ಲ್ಯೂ | 1 |
| ತಂದೆ:ಗಂಡನ ಹೆಸರು | : | ಹನುಮಂತಪ್ಪ | ಸಿಡಬ್ಲ್ಯೂ | 1 |
| ವಯಸ್ಸು | : | 65 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸ ಸ್ಥಳ | : | ಮಾರನಬೀಡ | | |

**ದಿನಾಂಕ:23-08-2023 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರಕಾರಿ ಅಭಿಯೋಜಕರಿಂದ:**

ಮೃತ ಬಸವರಾಜ ನನ್ನ ಅಣ್ಣನ ಮಗ. ಚಾಸಾ-6 ರವರು ಗೊತ್ತು. ಕಳೆದ 5-6 ವರ್ಷಗಳ ಹಿಂದೆ ಸಂಜೆ 6.00 ಗಂಟೆ ಸಮಯದಲ್ಲಿ ಹೊಂಬಳಿ ಗ್ರಾಮದ ಹತ್ತಿರ ಅಪಘಾತವಾಗಿತ್ತು. ಈ ಅಪಘಾತವು ನನ್ನ ಅಣ್ಣನ ಮಗ ಮೃತ ಬಸವರಾಜ, ಚಾಸಾ-6 ಮತ್ತು ಮತ್ತೊಬ್ಬ ಹುಡುಗ ಬೈಕ್ ನಲ್ಲಿ ಹೋಗುತ್ತಿರುವಾಗ ಎದುರುಗಡೆಯಿಂದ ಬೈಕ್ ನಲ್ಲಿ ಬರುತ್ತಿದ್ದ ಆರೋಪಿ ಮೃತ ಬಸವರಾಜ ಓಡಿಸುತ್ತಿದ್ದ ಬೈಕ್ ಡಿಕ್ಕಿಪಡಿಸಿದನು. ಆ ಸಂದರ್ಭದಲ್ಲಿ ಆರೋಪಿ ಆ ಮೋಟಾರ ಸೈಕಲ ಅನ್ನು ಜೋರಾಗಿ ಚಲಾಯಿಸಿ ಅಪಘಾತಪಡಿಸಿದನು. ಈ ವಿಚಾರವನ್ನು ಚಾಸಾ-9 ರವರು ಫೋನ್ ಮೂಲಕ ತಿಳಿಸಿದರು. ಇದರಿಂದ ಬಸವರಾಜಿನ ಕಾಲುಗೆ ಮತ್ತು ತಲೆಗೆ ಪೆಟ್ಟಾಗಿತ್ತು. ಚಾಸಾ-6 ರವರಿಗೂ ಸಹ ಎದೆಗೆ ಪೆಟ್ಟಾಗಿತ್ತು. ಆ ನಂತರ ಬೇರೆಯವರಿಗೆ ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಈ ಸಂಬಂಧವಾಗಿ ಬಸವರಾಜನನ್ನು ಬೆಳಗಾಲಪೇಟೆ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದವು. ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ಕಿಮ್ಸ ಆಸ್ಪತ್ರೆಯಲ್ಲಿ ಒಂದು ವಾರಗಳ ಕಾಲ ಚಿಕಿತ್ಸೆ ಪಡೆದು ಆ ನಂತರ ಆಸ್ಪತ್ರೆಯಲ್ಲಿ ಮೃತಪಟ್ಟನು. ಈ ಬಗ್ಗೆ ಪೊಲೀಸರಿಗೆ ದೂರು ನೀಡಿರುತ್ತೇನೆ. ಆ ದೂರನ್ನು ಈಗ ನೋಡುತ್ತಿದ್ದು, ಅದು ನಿಪಿ.1 ಎಂದು, ಸದರಿಯವರ ಸಹಿಯನ್ನು

ನಿಪಿ.1(ಎ) ಎಂದು ಗುರುತಿಸಲಾಯಿತು. ಆ ದೂರನ್ನು ಚಾಸಾ-4 ರವರಿಂದ ಬರೆಸಿರುತ್ತೇನೆ. ಆ ನಂತರ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದರು. ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ, ಅದು ನಿಪಿ 2 ಎಂದು, ಸದರಿಯವರ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ನನ್ನ ಜೊತೆ ಚಾಸಾ-2 ಮತ್ತು 3 ರವರು ಸಹ ಆ ಸ್ಥಳಲ್ಲಿದ್ದರು. ಆಗ ಸಂಜೆ 6.00 ರಿಂದ 7.00 ಗಂಟೆ ಸಮಯವಾಗಿತ್ತು. ಆ ಸಂದರ್ಬದಲ್ಲಿ ಪೊಲೀಸರು ಆ ಸ್ಥಳದ ಪೋಟೋವನ್ನು ಸಹ ತೆಗೆದರು. ಆ ಪೊಟೋವನ್ನು ಈಗ ನೋಡುತ್ತಿದ್ದು, ಅದು ನಿಪಿ.3 ಎಂದು ಗುರುತಿಸಲಾಯಿತು. ಈ ಅಪಘಾತವು ಆರೋಪಿಯ ತಪ್ಪಿನಿಂದಲೇ ಆಯಿತು ಎಂಬುದು ಆ ನಂತರ ಗೊತ್ತಾಯಿತು. ಆ ದಿನ ಅಪಘಾತಪಡಿಸಿದ ವ್ಯಕ್ತಿ ನ್ಯಾಯಾಲಯದ ಮುಂದಿರುವ ಆರೊಪಿಯಾಗಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅನುಮತಿ ನೀಡಲಾಗಿದೆ)**

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ**

ದಿಃ23-11-2015 ರಂದು ಸಂಜೆ 6.40 ಗಂಟೆ ಸಮಯದಲ್ಲಿ ಹೊಂಬಳಿ ಸಮೀಪ ಇರುವ ಚಾಸಾ-9 ರವರ ಜಮೀನಿನ ಹತ್ತಿರ ಆಯಿತು ಎಂದರೆ ಸರಿ. ಆ ಸಂದರ್ಬದಲ್ಲಿ ಚಾಸಾ-6 ರವರು ತನ್ನ ಮಗ ಅಭಿರವರನ್ನು ಆಸ್ಪತ್ರೆಗೆ ತೋರಿಸುವ ಸಂಬಂಧವಾಗಿ ತನ್ನ ಬೈಕ್ ನಂಬರ ಕೆಎ-27/ಇಇ-5882 ಅನ್ನು ಬಸವರಾಜ ರವರನ್ನು ಕರೆದುಕೊಂಡು ಹೊಂಬಳಿ ಬಿಂಗಾಪುರ ಮಾರ್ಗವಾಗಿ ಬೆಳಗಾಲಪೇಟೆಗೆ ಹೋಗುತ್ತಿದ್ದಾಗ ಹೊಂಬಳಿ ಹತ್ತಿರ ಆರೋಪಿ ತನ್ನ ಬಾಬ್ತು ಮೋಟಾರ್ ಸೈಕಲ ಕೆಎ-27 ಎಸ್-1822 ಅನ್ನು ಬಿಂಗಾಪುರ ಕಡೆಯಿಂದ ಹೊಂಬಳ್ಳಿಯ ಕಡೆಗೆ ಅತೀ ವೇಗವಾಗಿ ಮತ್ತು ಅಜಾಗ್ರುಕತೆಯಿಂದ ಚಲಾಯಿಸಿಕೊಂಡು ಬಂದು ಚಾಸಾ-6 ರವರು ಚಲಾಯಿಸುತ್ತಿದ್ದ ಬೈಕ್ ಗೆ ಡಿಕ್ಕಿಪಡಿಸಿದನು ಎಂದರೆ ಸರಿ. ಇದರಿಂದ ಚಾಸಾ-6 ರವರ ತಲೆಗೆ ಎಡಗೈ ಬುಜಕ್ಕೆ, ಬಲ ಮುಂಗೈಗೆ, ಮತ್ತು ಬಸವರಾಜರವರ ಬಲಗಾಲ ಪಾದಕ್ಕೆ, ತಲೆಗೆ ಮತ್ತು ಅಭಿಗೆ ಹಣೆಗೆ, ಮೈಕೈಗೆ ತೀವ್ರ ಸ್ವರೂಪದ ಗಾಯಗಳು ಆದವು ಎಂದರೆ ಸರಿ. ಅದೇ ರೀತಿ ಆರೊಪಿಯ ಬೈಕ್ ನ ಹಿಂಬದಿ ಕುಳಿತಿದ್ದ ಚಾಸಾ-8 ರವರಿಗೂ ಸಹ ತಲೆಗೆ, ಕಣ್ಣಿನ ಹತ್ತಿರ, ಬೆನ್ನಿಗೆ, ಹಾಗು ಆರೋಪಿಗೂ ಸಹ ಎಡಗಡೆ ಭುಜಕ್ಕೆ ಗಾಯಗಳು ಆದವು

ಎಂದರೆ ಸರಿ. ಅಪಘಾತವಾದ ನಂತರ ಗಾಯಾಳುಗಳ್ನು ಹಾನಗಲ್ಲನ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿ. ಆ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬಸವರಾಜರವರನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸುತ್ತಿರುವಾಗ ದಿಃ29-11-2015 ರಂದು ಬೆಳಿಗ್ಗೆ 9.50 ಗಂಟೆ ಸಮಯದಲ್ಲಿ ಆಸ್ಪತ್ರೆಯಲ್ಲಿ ಮೃತಪಟ್ಟನು ಎಂದರೆ ಸರಿ. ನಾನು ಗಾಯಳುಗಳ ಜೊತೆ ಆಸ್ಪತ್ರೆಯಲ್ಲಿದ್ದ ಕಾರಣ ಆಸ್ಪತ್ರೆಯಿಂದ ಬಂದು ಈ ದೂರನ್ನು ಸಲ್ಲಿಸಿರುತ್ತೇನೆ. ದಿಃ30-11-2015 ರಂದು ಬೆಳಿಗ್ಗೆ 9.00 ರಿಂದ 10.00 ಗಂಟೆ ಸಮಯದಲ್ಲಿ ನನ್ನ, ಚಾಸಾ-2 ಮತ್ತು 3 ರವರ ಸಮಕ್ಷಮ ಪೊಲೀಸರು ಸ್ಥಳ ಪಂಚನಾಮೆ ಬರೆದರು ಎಂದರೆ ಸರಿ.

**(ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದು, ರೂ.200/-ಗಳ ಖರ್ಚು ಸಹಿತ ಕಾಲಾವಕಾಶವನ್ನು ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ